# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1193 (1255)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ವಿಷಯ : ಭೂ ಪರಿವರ್ತನೆ ಮತ್ತು 9/11ಎ ನಕ್ಷೆ ಮಂಜೂರಾತಿ ಕುರಿತ ಮಾಹಿತಿ

(ಅ) ಭೂ ಪರಿವರ್ತನೆಯಾಗಿರುವ ಜಾಗಗಳನ್ನು ಕ್ರಮಬದ್ಧ ಆಸ್ತಿಗಳೆಂದು ಪರಿಗಣಿಸಿ ಖಾಲಿ ಜಾಗಗಳಿಗೆ ವಿನ್ಯಾಸ ನಕ್ಷೆ ಮಂಜೂರಾತಿಯನ್ನು ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಿಂದ ನೀಡಲಾಗುತ್ತಿದ್ದ, ಭೂ ಪರಿವರ್ತನೆಯಾಗಿರುವ ಜಾಗಗಳಲ್ಲಿ ಈಗಾಗಲೇ ಮನೆ/ಕಟ್ಟಡಗಳನ್ನು ನಿರ್ಮಿಸಿದ್ದಲ್ಲಿ ವಿನ್ಯಾಸ ನಕ್ಷೆ ಮಂಜೂರಾತಿ ನೀಡುವಾಗ ಅನುಸರಿಸಬೇಕಾದ ಕ್ರಮಗಳೇನು ;

(ಆ) ಭೂ ಪರಿವರ್ತನೆಯಾಗಿರುವ ಜಾಗಗಳಿಗೆ ನಮೂನೆ-9 ಮತ್ತು 11ಎ ಅನ್ನು ಪಡೆಯದೇ ಬ್ಯಾಂಕುಗಳು ಕಟ್ಟಡ ಇತ್ಯಾದಿಗಳಿಗೆ ಸಾಲ ನೀಡಿ, ಮರು ಪಾವತಿಸಿದಿದ್ದಲ್ಲಿ, ಬ್ಯಾಂಕುಗಳು ಅಂತಹವರ ಜಾಗವನ್ನು ಏಲಂ ಮೂಲಕ ವಿಲೇ ಮಾಡಿದ ನಂತರ ನಮೂನೆ-9 ಮತ್ತು 11ಎ ನ್ನು ಸಾಲ ಪಡೆದವರ ಹೆಸರಿನಲ್ಲಿ ನೀಡಬೇಕೇ ; ಅಥವಾ ಏಲಂನಲ್ಲಿ ವಂಚಿಸಿಕೊಂಡವರ ಹೆಸರಿಗೆ ನೀಡಬೇಕೇ ? (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)